
ಪುಸ್ತಕ ಪರಿಚಯ

# 'ತತ್ತ್ವಶಾಸ್ತ್ರವಿಭಾಗ'ದ ಶತಕ ಸಂಭ್ರಮ

ಮೈಸೂರು ವಿಶ್ವವಿದ್ಯಾನಿಲಯದ ತತ್ತ್ವಶಾಸ್ತ್ರವಿಭಾಗಕ್ಕೆ ಸುದೀರ್ಘ ಪರಂಪರೆಯಿದೆ. ಭಾರತೀಯ ಹಾಗೂ ಪಾಶ್ಚಾತ್ಯ ತತ್ತ್ವಶಾಸ್ತ್ರಗಳಲ್ಲಿ ಹೆಸರು ಮಾಡಿದ ಮಹಾನ್ ದಿಗ್ಗಜಗಳು ಇಲ್ಲಿ ಪ್ರಾಧ್ಯಾಪಕರಾಗಿ, ಸಂಶೋಧಕರಾಗಿ, ಮಾರ್ಗದರ್ಶಕರಾಗಿ ಸೇವೆ ಸಲ್ಲಿಸಿದ್ದಾರೆ. ಅಂದಿನಿಂದ ಇಂದಿನವರೆಗೆ ವಿಶ್ವವಿದ್ಯಾನಿಲಯದಲ್ಲಿ ಬೆಳಗಿದ ತತ್ತ್ವಶಾಸ್ತ್ರಜ್ಞರ, ಸಂಶೋಧಕರ ಒಂದು ವಿಸ್ತೃತವಾದ ಅವಲೋಕನ 'Hundred years of Philosophy in Mysore University - An Ooverview' ಎಂಬ ಹೊಸ ಗ್ರಂಥದಲ್ಲಿದೆ. ೨೦೧೮ರ ಮಾರ್ಚ್ ೨೨ರಿಂದ ೨೪ರ ವರೆಗೆ ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಂಡಿಸಿದ ಹತ್ತು ಹಲವು ಪ್ರಬಂಧಗಳ ಹಾಗೂ ವಿಚಾರಧಾರೆಗಳ ಸಂಕಲನ ಇದಾಗಿದೆ. ಶ್ರೀ ಎಸ್. ವೆಂಕಟೇಶ್ ಹಾಗೂ ಶ್ರೀ ವಿ. ಎನ್. ಶೇಷಗಿರಿರಾವ್ ಅವರು ಸಂಪಾದಿಸಿರುವ ಈ ಗ್ರಂಥವು ಒಂದು ಪ್ರಮುಖ ಸಂಸ್ಥೆಯ, ಮಹಾನ್ ವಿದ್ವಾಂಸರ ಹಾಗೂ ಹಲವು ತಲೆಮಾರುಗಳಲ್ಲಿ ಹರಿದುಬಂದ ಜ್ಞಾನ ಪರಂಪರೆಯ ಸುದೀರ್ಘ ಇತಿಹಾಸವನ್ನು ದಾಖಲಿಸಿದೆ. ತತ್ತ್ವಶಾಸ್ತ್ರ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ತತ್ತ್ವಶಾಸ್ತ್ರವಿಭಾಗದ ಚರಿತ್ರೆ, ಚಟುವಟಿಕೆ ಹಾಗೂ ಸಾಹಿತ್ಯರಚನೆಯ ಬಗ್ಗೆ ಆಸಕ್ತಿಯಿರುವವರಿಗೆ ಈ ಕೃತಿಯಲ್ಲಿ ಅನೇಕ ಮಾಹಿತಿಗಳ ಲಭಿಸುತ್ತವೆ. ಬಹುತೇಕ ಲೇಖನ ಗಳು ಇಂಗ್ಲಿಷ್‌ಭಾಷೆಯಲ್ಲಿವೆ; ಕೆಲವು ಕನ್ನಡ ಲೇಖನಗಳೂ ಇದರಲ್ಲಿ ಸೇರ್ಪಡೆಯಾಗಿವೆ.




ಡಾ. ಎಸ್.ಎಲ್.ಭೈರಪ್ಪನವರ ಉದ್ಘಾಟನಾ ಭಾಷಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅವರು ಮಾಡಿದ ಸಂಶೋಧನೆಯ ದಿನಗಳ ನೆನಪುಗಳಿವೆ. ಮುಂದೆ ಬರುವ ಲೇಖನಗಳಲ್ಲಿ ಪ್ರೊ. ಎ.ಆರ್.ವಾಡಿಯಾ, ಡಾ. ಎಸ್.ರಾಧಾಕೃಷ್ಣನ್, ಪ್ರೊ. ಎಂ. ಹಿರಿಯಣ್ಣ, ಬ್ರಜೇಂದ್ರನಾಥ ಸೀಲ್, ಪ್ರೊ. ಕೆ.ಆರ್. ಶ್ರೀನಿವಾಸ ಐಯ್ಯಂಗಾರ್, ಪ್ರೊ. ಜಿ. ಹನುಮಂತರಾವ್, ಪ್ರೊ.ಎಸ್.ಎಸ್.ರಾಘವಾಚಾರ್, ಪ್ರೊ.ಕೆ.ಬಿ.ರಾಮಕೃಷ್ಣರಾವ್ ಮೊದಲಾದ ಪ್ರಸಿದ್ಧ ತತ್ತ್ವಶಾಸ್ತ್ರವಿದ್ವಾಂಸರ ಬಗೆಗಿನ ಲೇಖನಗಳಿವೆ. ಈ ಗ್ರಂಥದ ಅನೇಕ ಮಂದಿ ಲೇಖಕರು ಶ್ರೇಷ್ಠ ತತ್ತ್ವಶಾಸ್ತ್ರಜ್ಞರ ಶಿಷ್ಯರಾಗಿದ್ದು, ನುರಿತ ಗುರುಗಳಿಂದ ತರಬೇತಿ ಪಡೆದಿದ್ದಾರೆ; ತಮ್ಮ ಗುರುಗಳ ನೆನಪಿನ ಬುತ್ತಿಯನ್ನು ಹಂಚಿಕೊಳ್ಳುವುದರೊಂದಿಗೆ, ತತ್ತ್ವಶಾಸ್ತ್ರಕ್ಕೂ ಮಹಾನ್ ವ್ಯಕ್ತಿಗಳ ಜೀವನಕ್ಕೂ ಹೇಗೆ ಅಸಾಧಾರಣ ನಂಟು ಬೆಸೆದಿರುತ್ತದೆ ಎಂಬುದನ್ನೂ ಪ್ರಕಟಪಡಿಸುವ ಹಲವು ಪ್ರಸಂಗಗಳನ್ನು ವಿವರಿಸಿದ್ದಾರೆ.

ಈ ಕೃತಿಯು ಕೇವಲ ಹಳೆಯ ಕಾಲದ ವ್ಯಕ್ತಿಗಳ ಹಾಗೂ ಘಟನೆಗಳ ದಾಖಲೆಯಲ್ಲ; ಕೇವಲ ತತ್ತ್ವ-ಚಿಂತನೆಗಳನ್ನು ಒಳಗೊಂಡ ಗ್ರಂಥವೂ ಅಲ್ಲ. ಇಲ್ಲಿ ತುಂಬ ಸ್ವಾರಸ್ಯಕರವಾದ ಉತ್ತಮ ಪ್ರಸಂಗಗಳೂ ಇವೆ. ಒಂದು ಉದಾಹರಣೆ:

''ಇನ್ನೊಂದು ಸ್ವಾರಸ್ಯಕರ ವಿಷಯ ಹೇಳಬಯಸುತ್ತೇನೆ. ನಾವು ಪರೀಕ್ಷೆ ಮುಗಿಸಿಕೊಂಡು ಮನೆಗೆ ಬಂದರೆ ಎಲ್ಲ ಪ್ರಶ್ನೆಗಳಿಗೂ ಉತ್ತರ ಬರೆದಿದ್ದೀರ ಅಂತ ಕೇಳುತ್ತಿದ್ದರು. ಯಾಕೆ ಎಂದು ಕೇಳಿದರೆ ತಮ್ಮ ಜೀವನದ ಒಂದು ಘಟನೆ ಹೇಳಿದರು. ಅವರು ಪರೀಕ್ಷೆಯಲ್ಲಿ ಒಂದು ಪ್ರಶ್ನೆಗೆ ಉತ್ತರ ಬರೀತಾ ಬರೀತಾ ಅದರಲ್ಲಿ ಎಷ್ಟು ತಲ್ಲೀನರಾಗಿದ್ದರಂತೆ ಎಂದರೆ ಅವರಿಗೆ ಟೈಮ್ ತಿಳಿಯದೇ ೩ ಘಂಟೆಗಳ ಕಾಲ ಒಂದೇ ಪ್ರಶ್ನೆಗೆ ಉತ್ತರ ಬರೆದಿದ್ದರಂತೆ. ಮಿಕ್ಕ ಪ್ರಶ್ನೆಗೆ ಉತ್ತರ ಬರೆಯಲು ಸಮಯವೇ ಸಿಕ್ಕದೆ ಈ ಸಲ ತಾವು ಫೇಲ್ ಎಂದುಕೊಂಡು ಆಚೆ ಬಂದರಂತೆ. ಆದರೆ ಅವರ ಆ ಒಂದೇ ಉತ್ತರಕ್ಕೆ ೧೦೦ ಅಂಕ ಕೊಟ್ಟಿದ್ದರಂತೆ. ಇನ್ನು ಹೇಗಿರಬಹುದು ಆ ಉತ್ತರ! ನೀವು ಹಾಗೆ ಮಾಡಬೇಡಿ ನಿಮಗೆ ಯಾರು ಹಾಗೆಲ್ಲ ಕೊಡಲ್ಲ ಎಂದು ಹೇಳುತ್ತಿದ್ದರು.''

*('ಪ್ರೊ.ಜಿ.ಹನುಮಂತರಾವ್ – ತತ್ತ್ವಜ್ಞಾನಿಯಾಗಿ ನನ್ನ ತಾತ' ಲೇಖನ, ಶ್ರೀಮತಿ ಜಿ. ಆರ್.ಶೈಲಜಾ, ಪು.೭೭)*

ಅಭಿನಂದನಾ ಗ್ರಂಥ, ಸ್ಮರಣ ಸಂಚಿಕೆಗಳಂತಿರುವ ಈ ಕೃತಿಯಲ್ಲಿ ಸ್ವಾರಸ್ಯವೇನಿದೆ ಎಂದು ಕೆಲವರು ಭಾವಿಸಬಹುದು. ಆದರೆ, ವ್ಯಕ್ತಿಗಳಿಗೊಂದು ವ್ಯಕ್ತಿತ್ವವಿರುವಂತೆ, ಸಂಸ್ಥೆಗಳಿಗೂ ಒಂದು ವ್ಯಕ್ತಿತ್ವವಿದೆ. ಹತ್ತುಹಲವು ಮಂದಿ ಒಟ್ಟು ಸೇರಿ ನಡೆಸುವ ಒಂದು ಸಂಸ್ಥೆಗೆ ಅನೇಕ ಬಗೆಯ ಆಯಾಮಗಳಿರುತ್ತವೆ. ಚಾರಿತ್ರಿಕ, ಸಾಂಸ್ಕೃತಿಕ, ತಾತ್ತ್ವಿಕ–ಹೀಗೆ ಹಲವು ನಿಟ್ಟಿನಲ್ಲಿ ಈ ವ್ಯಕ್ತಿತ್ವದ ದರ್ಶನ ಮಾಡಬಹುದು. ಮೈಸೂರು ವಿಶ್ವವಿದ್ಯಾನಿಲಯ ತತ್ತ್ವಶಾಸ್ತ್ರವಿಭಾಗದ ವ್ಯಕ್ತಿತ್ವ ಈ ರೀತಿ ಘನತರವಾದುದ್ದು; ಅದನ್ನು ಅರಿಯುವ ಪ್ರಯತ್ನ ಮಾಡಲು ಈ ಕೃತಿಯನ್ನು ಓದುವುದು ಸೂಕ್ತ.

**ಕೃತಿ:** Hundred Years of Philosophy in Mysore University - An Overview

**ಲೇಖಕರು :** S. Venkatesh, V.N. Sheshagiri Rao

**ಪ್ರಕಾಶನ :** Chairman, Department of Studies in Philosophy University of Mysore